# ನುಡಿಚಿತ್ರ ಬರವಣಿಗೆ ಕಲೆ Art of Feature Writing

ಯಾವುದೇ ಒಂದು ವಸ್ತು ಸಂಗತಿ, ಘಟನೆ ಸುದ್ದಿ ಮೊದಲಾದವುಳ ಹಿನ್ನೆಲೆ, ಅದರ ಮುಖ್ಯ ಲಕ್ಷಣಗಳು ಗುಣಾವುಣಗಳು, ಹಲವು ಮುಖಗಳು ಮೊದಲಾದವುಗಳನ್ನು ಕೂಲಂಕುಶವಾಗಿ ಗಮನಿಸಿ, ಕಣ್ಣಲ್ಲಿ ಕಣ್ಣಟ್ಟು ನೋಡಿ, ಆಳವಾಗಿ ಅಧ್ಯಯನ ಮಾಡಿ ಸರಳವಾಗಿ ಹೇಳುವುದಾದರೆ, ಮಾತಿನಲ್ಲಿ ಯಾವುದೇ ವಿಷಯದ ಹಲವಾರು ವಿನ್ಯಾಸಗಳನ್ನು ಆಯಾಮಗಳನ್ನು ಹಂತಹಂತವಾಗಿ ನಿರೂಪಿಸುತ್ತ ಒಂದು ಸಮಗ್ರ ಚಿತ್ರ ಕಟ್ಟಿಕೊಡುವುದು. .

**ನುಡಿಚಿತ್ರ:–** ಸುದ್ಧಿ, ಲೇಖನ, ಸಂಪಾದಕೀಯ, ವರದಿಗಿಂತ ಓದುಗನ ಭಿನ್ನ ಆಸಕ್ತಿದಾಯಕ ವಿಷಯ ನುಡಿಚಿತ್ರ.

## ನುಡಿಚಿತ್ರದ ಪ್ರಕಾರಗಳು Types Feature Writing

1) ಸುದ್ದಿ ನುಡಿಚಿತ್ರ
2) ವ್ಯಕ್ತಿ ನುಡಿಚಿತ್ರ
3) ಮಾನವಾಸಕ್ತಿ ನುಡಿಚಿತ್ರ
4) ಪ್ರಚಲಿತ ವಿದ್ಯಾಮಾನದ ನುಡಿಚಿತ್ರ
5) ವರದಿಯ ವಿಶ್ಲೇಷಣೆ ನುಡಿಚಿತ್ರ

**ನುಡಿಚಿತ್ರ ಎಂದರೆ:–** ಯಾವುದೇ ಒಂದು ವಸ್ತು ಸಂಗತಿ, ಘಟನೆ ಸುದ್ಧಿಮೊದಲಾದವುಗಳ ಹಿನ್ನೆಲೆ ಅದರ ಮುಖ್ಯ ಲಕ್ಷಣಗಳು ಗುಣವಾಗುಣಗಳು ಹಲವು ಮುಖಗಳು ಮೊದಲಾದವುಗಳನ್ನು ಕೂಲಂಕುಶವಾಗಿ ಗಮನಿಸಿ ಕಣ್ಣಲ್ಲಿ ಕಣ್ಣಿಟ್ಟು, ನೋಡಿ, ಆಳವಾಗಿ ಅಧ್ಯಯನಮಾಡಿ ಚಿತ್ರವತ್ತಾಗಿ ದರ್ಶನ ಮಾಡಿಸುವುದನ್ನೆ ನುಡಿಚಿತ್ರ ಎನ್ನುವರು.

## ನುಡಿಚಿತ್ರದ ನಿಯಮಗಳು Feature Writing Rules

**1) ವಿಷಯದ ಆಯ್ಕೆ ಮತ್ತು ವಿವರ ಸಂಗ್ರಹ:–**

ನುಡಿಚಿತ್ರ ಬರೆಯಲು ಮೊದಲು ವಿಷಯದ ಆಯ್ಕೆ ಬಹುಮುಖ್ಯ ಆಯ್ಕೆ ಮಾಡಿಕೊಂಡಾದ ನಂತರ ವಿಷಯದ ಕುರಿತು ವಿವರಣೆ ಸಂಗ್ರಹಿಸಿ ನಿಡಿಚಿತ್ರ ರಚಿಸಬಹುದಾಗಿದೆ.

**2) ಸಕಾಲಿಕತೆ :–**

ಸಕಾಲಿಕತೆಯಲ್ಲಿ ಅಂದರೆ ಸಂದರ್ಭಕ್ಕೆ ತಕ್ಕಂತೆ ನುಡಿಚಿತ್ರ ಆಯಾ ಸಮಯಕ್ಕೆ ಸರಿಯಾಗಿ ನುಡಿಚಿತ್ರಗಳನ್ನು ರಚಿಸಿ ಪ್ರಕಟಿಸಬೇಕಾಗುತ್ತದೆ.

**3) ಆಕರ್ಷಣೆ:–**

ನುಡಿಚಿತ್ರವು ಆಕರ್ಷಕವಾಗಿರಬೇಕು ಹಾಗೂ ಓದುಗನನ್ನು ಮನಸೇಳೆಯ ಬೇಕು. ನುಡಿಚಿತ್ರವು ಓದುಗರನ್ನು ಓದಿಸಿಕೊಂಡು ಹೋಗುವ ರೀತಿಯಲ್ಲಿ ರಚಿಸಲ್ಪಟ್ಟಿರಬೇಕು. ಹಂತ ಹಂತದ ನೀರೂಪಣೆ ಇರಬೇಕಾಗುತ್ತದೆ.

**4) ಪೂರ್ವ ಯೋಜನೆ:–**

ನುಡಿಚಿತ್ರ ಬರೆಯುವ ಮೊದಲು ಅದರ ಬಗ್ಗೆ ಎಲ್ಲಾ ಮಾಹಿತಿ ಕಲೆ ಹಾಕಿಕೊಂಡು ನಂತರ ಬರೆಯಲು ಪ್ರಾರಂಭಿಸಬೇಕಾಗುತ್ತದೆ. ನುಡಿಚಿತ್ರ ಬರೆಯುವ ಮುನ್ನ ಆ ವಿಷಯದಬಗ್ಗೆ ಕೂಲಂಕುಶವಾಗಿ ಅಧ್ಯಯನಮಾಡಿ ಸತ್ಯ ಸತ್ಯೆಗಳನ್ನು ಪರಿಗಣಿಸಿ ಸಂದರ್ಭಕ್ಕೆ ಅನುಗುಣವಾಗಿ ನುಡಿಚಿತ್ರವನ್ನು ರಚಿಸಬೇಕು.

**5) ಮನೋರಂಜನೆ:–**

ನುಡಿಚಿತ್ರದ ಪ್ರಮುಖ ಉದ್ದೇಶವೇ ಮನೋರಂಜನೆಯಾಗಿದೆ. ಓದುಗರನ್ನು ರಂಜಿಸುವ ರೀತಿಯಲ್ಲಿ ನುಡಿಚಿತ್ರವನ್ನು ರಚನೆಮಾಡಬೇಕು.

**6) ಶಿಕ್ಷಣ :–**

ಓದುಗರಿಗೆ ಶಿಕ್ಷಣ ನೀಡಿಕೆ ಪತ್ರಿಕೋದ್ಯಮದ ಆದ್ಯ ಕರ್ತವ್ಯಗಳಲ್ಲಿ ಒಂದು. ಪತ್ರಿಕೆ ಪ್ರತಿಬಾರಿ ಹೋಸವಿಚಾರ ಮಾಹಿತಿ ಪ್ರಕಟಿಸಿದಾಗ ಓದುಗರ ಅರಿವಿನ ಮಟ್ಟ ಹೆಚ್ಚುತ್ತದೆ. ಶೈಕ್ಷಣಿಕ ಅಂಶಗಳೂಳ್ಳ ನುಡಿಚಿತ್ರ ನೈಜವಾಗಿ ಉಪಯುಕ್ತ.

**7) ಉತ್ತಮ ಸಾಹಿತ್ಯ ಮತ್ತು ನುಡಿಚಿತ್ರಗಳ ಅಧ್ಯಯನ:–**

ಅಧ್ಯಾಯನ ಮಾಡುವಾಗ ಗಮನರ್ಹ ಪದಗಳನ್ನು ಮತ್ತು ವಾಖ್ಯಗಳನ್ನು ಟೀಪ್ಪಣಿ ಮಾಡಿಕೋಳ್ಳುವುದು ಸೂಕ್ತ ಅದೇ ರೀತಿಯಲ್ಲಿ ಬಾನುಲಿ ಮತ್ತು ದೂರದರ್ಶನಗಳಲ್ಲಿನ ಕರ್ಯಕ್ರಮಗಳು ಸಹ ಇಲ್ಲಿ ಒಂದು ಎಚ್ಚರಿಕೆ ಸೂಚನೆ. ನುಡಿಚಿತ್ರ ಪ್ರಮುಖ ಅಂಶವೆಮದರೆ ಸಾಹಿತ್ಯೇಕವಾಗಿ ಬರಹಗಳು ತುಂಬ ಪ್ರಮುಖವಾಗಿವೆ.

**8) ಸಾಹಿತ್ಯ ಶೈಲಿಯ ಬೆಳವಣಿಗೆ:–**

ನುಡಿಚಿತ್ರ ಲೇಖಕರು ಸ್ವತಃ ಸಾಹಿತ್ಯೀಕ ಬರಹ ಶೈಲಲಿಯನ್ನು ರೂಢಿಸಿಕೊಳ್ಳಬೇಕು. ಇದು ಸತತ ಅಭ್ಯಾಸದಿಂದ ಮಾತ್ರ ಸಾಧ್ಯ. ಉಪಮಾನ ಮತ್ತು ಉಪಮೇಯಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಕ್ಕೆ ತಕ್ಕಂತೆ ಬಳಸಲು ಕಲಿಯಬೇಕು ಸರಳ ಪದಗಳನ್ನು ಹೋಸ ಪದಗಳನ್ನು ಬಸಲಿಬೇಕು. ಸ್ವಮತ ಪದಗಳನ್ನು ಸೃಷ್ಟಿಸುವುದು ಒಂದು ಕಲೆ.

**9) ವಿಶೇಷ ಪರಿಜ್ಞಾನ :–**

ತಾನು ಬರೆಯಲಿರುವ ವಿಷಯದ ಬದ ಬಗ್ಗೆ ಲೇಖಕನಿಗೆ ಸಮಗ್ರ ತಿಳುವಳಿಕೆ ಅವಶ್ಯ. ಮಾಹಿತಿ ಸಂಗ್ರಹಿಸಿದಾಗ ಬರಹದಲ್ಲಿ ನಿರ್ಧಿಷ್ಟತೆ, ಉತ್ಪಾನ್ನವಾಗುತ್ತದೆ. ನುಡಿಚಿತ್ರದಲ್ಲಿ ವಿಷಯ ಪರಿಜ್ಞಾನ ತುಂಬ ಪ್ರಮುಖವಾಗಿರುತ್ತದೆ. ಬರೆದ ಬರಹವನ್ನು ಎರಡರಿಂದ ಮೂರುಬಾರಿ ಓದುವುದರಿಂದ ತಪ್ಪುಗಳನ್ನು ತಿದ್ದುಕೊಳ್ಳುವುದಲ್ಲಿ ಅದು ಸಹಾಯಕವಾಗುತ್ತದೆ.

**10)ಸುದ್ದಿ ಸೂಕ್ಷ್ಮ ಪರಿಶಿಲನೆ:–**

ನುಡಿಚಿತ್ರ ಬರಹಗಾರ ಪತ್ರಿಕೆಗಳ ಸೂಕ್ಷ್ಮ ಪರಿಶಿಲನೆ ನಡೆಸಬೆಕು. ಪತ್ರಿಕೆಗಳು ನುಡಿಚಿತ್ರಗಳಿಗೆ ಬೇಕಾದ ವಿಷಯ ಗ್ರಾಸವನ್ನು ಓದಗಿಸುತ್ತವೆ. ಸುದ್ದಿಯಿಂದ ನುಡಿ ಚಿತ್ರಕ್ಕೆ ಅಗತ್ಯವಾದ ವಿಷಯ ದೂರೆಯನಹುದು.

# ಸಂಪಾದಕೀಯ Editorial

ರಾಷ್ಟ್ರಹಿತ, ಸಾರ್ವಜನಿಕ ಹಿತಕ್ಕೆ ಸಂಬಂದಿಸಿದ ಮಹತ್ವದ ವಿಷಯಗಳು, ಮಹತ್ವದ ಪ್ರಚಲಿತ ಸಮಸ್ಯೆಗಳು, ಯೋಜನೆಗಳು, ಆಡಳಿತ ವೈಖರಿ ಮೊದಲಾದವುಗಳ ಬಗ್ಗೆ ವಿಮರ್ಶಾತ್ಮಕವಾಗಿ ಸಂಪಾದಕ ಬರೆಯುವ ಬರಹವನ್ನು ಸಂಪಾದಕೀಯ ಎಂದು ಕರೆಯಲಾಗುತ್ತದೆ. ಕೆಲವು ಪತ್ರಿಕೆಗಳಲ್ಲಿ ಇದನ್ನು ಅಗ್ರ ಲೇಖನ ಎಂದೂ ಕರೆಯುವುದುಂಟು.

ಪತ್ರಿಕೆ ಯಾವ ವರ್ಗಕ್ಕೆ ಸೇರಿರಲಿ ಅದರಲ್ಲಿ ವಿವಿಧ ಬಗೆಯ ಬರಗಹಗಳಿರುತ್ತದೆ, ಸುದ್ದಿ ಬರಹಗಳು ಒಂದು ವರ್ಗವಾದರೆ ಅಭಿಪ್ರಾಯಗಳು ಮತ್ತೊಂದು ವರ್ಗ ಸಂಪಾದಕೀಯಗಳು ಓದುಗರ ಪತ್ರಗಳು, ಅಂಕಣಗಳು, ಲೇಖನಗಳು ಅಭಿಪ್ರಾಯ ಬರಹಗಳೊಂದಿಗೆ, ಸೇರಿರುತ್ತವೆ. ಸಂಗತಿಗಳಿಂದ ಸಂಗತಿಹಳ ಮೇಲೆ ಅಭಿಪ್ರಾಯ ಮೂಡುತ್ತದೆ, ಓದುಗರ ಪತ್ರದಲ್ಲಿ ಓದುಗರ ಪ್ರತಿಕ್ತಯೇ ಪ್ರಕಟವಾಗುತ್ತದೆ. ಪತ್ರಿಕೆಯ ನೀತಿಯ ಚೌಕಟ್ಟಿನಲ್ಲಿ ಅಭಿಪ್ರಾಯ ಮೂಡುತ್ತದೆ. ಪ್ರತಿಯೊಂದು ಪತ್ರಿಕೆಗೂ ತನ್ನದೆ ಆದ ನೀತಿಇರುತ್ತದೆ. ಅದರ ನೀಯಮದಡಿಯಲ್ಲಿ ಅಭಿಪ್ರಾಯ ತಲೆದೂರುತ್ತದೆ. ಈ ಅಭಿಪ್ರಾಯಕ್ಕೆ ಸಾರ್ವಜನಿಕ ಅಭಿಪ್ರಾಯವೇ ಅಡಿಗಲ್ಲು. ಸಂಪಾದಕರ ವೈಯಕ್ತಿಕ ಅಭಿಪ್ರಾಯಬೇರೆಯೇ ಇದ್ದರು, ಸಂಪಾದಕೀಯ ಅಭಿಪ್ರಾಯ ಪತ್ರಿಕೆಯ ನೀತಿಗೆ ರಾಲೇಯಾಗಬೇಕು.

- **ವ್ಯಾಖ್ಯೆಗಳು:–** ಒಂದು ಸುದ್ದಿ ಪತ್ರಿಕೆಯ ಒಟ್ಟು ಓದುಗರ ಆಡಳಿತ ಮಂಡಳಿಗಳ ಸಮ್ಮಿಳಿತ ಅಭಿಪ್ರಾಯ ಬರಹ ಅಥವಾ ಲೇಖವೇ ಸಂಪಾದಕೀಯ.

- ಸುದ್ದಿ ಪತ್ರಿಕೆಯೋಂದರ ವೈಯಕ್ತಿಕ ಅಭಿಪ್ರಾಯ ವಿಮರ್ಶೆ ಸಲಹಾರೂಪದ ಬನರವಣಿಯೇ ಸಂಪಾದಕೀಯ.

- ಗಂಭಿರ ಚಿಂತನೆಯ ಅಭಿಪ್ರಾಯಾ ಸಮಾಜ ಮತ್ತು ಸಮುದಾಯ ಮತ್ತು ಪ್ರಜಾಪ್ರಭುತ್ವವನ್ನು ಪ್ರತಿನಿಧಿಸುವ ಪತ್ರಿಕೋದ್ಯಮದ ಪರಿಣಾಮಕಾರಿ ಬರಹದ ಅಸ್ತ್ರವೇ ಸಂಪಾದಕೀಯ.

## ಸಂಪಾದಕೀಯ ಬರಹದ ಲಕ್ಷಣಗಳು

1) ಒಂದು ಸುದ್ದಿ ಪತ್ರಿಕೆಯ ಹೃದಯ ಭಾಗವೇ ಸಂಪಾಸದಕೀಯ ಬರಹ.
2) ಸುದ್ದಿ ಪತ್ರಿಕೆಯ ಒಮ್ಮತದ ಹಾಗೂ ಎಲ್ಲಾರನ್ನು ಪ್ರತಿನಿಧಿಸುವ ಬರಹ.
3) ದೈನಂದಿನ ಜೀವನದಲ್ಲಿ ನಡೆಯ ಬಹುದಾದ ಘಟನೆಗಳು, ಪ್ರಚಲಿತ ಸಮಸ್ಯೆಗಳು, ಯೋಜನೆಗಳು, ಸರಕಾರ ಆಡಳಿತ ವೈಖರಿ ಸಂಪಾದಕೀಯ ಬರಹದ ಪೂರಕ ಅಂಶಗಳು.
4) ಓದುಗರ ಪಾಲಿಗೆ ಸಂಪಾದಕೀಯ ಬರಹ ಮಿತ್ರ, ಮಾರ್ಗದರ್ಶಕ, ಭೂದಕ ತತ್ವಜ್ಞಾನಿ ಇದ್ದಂತೆ.

5) ಸಂಪಾದಕೀಯ ಬರಹ ಕೇವಲ ಒಂದು ಬರಹವಾಗಿರದೆ, ಸಮಾಜದ ಸಮುದಾಯದ ರಾಜ್ಯ ಹಾಗೂ ರಾಷ್ಟ್ರಗಳ ಓರೆಕೋರೆಗಳನ್ನು ತಿದ್ದುವ ಪರಿಣಾಮಕಾರಿ ಲೇಖನ.
6) ಸಂಪಾದಕೀಯ ಬರಹ ಯಾವುದೇ ಮಾದರಿಯಲ್ಲಿ ಇರಬಾರದು.

## ಸಂಪಾದಕೀಯ ಬರಹ ವಿಧಗಳು

1) ಅರ್ಥೈಸುವ, ವ್ಯಾಖ್ಯಾನಿಸುವ ಸಂಪಾದಕೀಯ
2) ಧಿಕ್ಸಾಬದ್ಧ ಸಂಪಾದಕೀಯ
3) ಪ್ರಶಂಸಾತ್ಮಕ / ಟೀಕಾತ್ಮಕ ಸಂಪಾದಕೀಯ

ಯಾವುದೇ ವಿಷಯವನ್ನು ಎಲ್ಲ ಮಗ್ಗುಲುಗಳಿಮದಲೂ ಅಧ್ಯಯನ ಮಾಡಿ, ಕೂಲಂಕುಶವಾಗಿ ಶೋಧಮಾಡಿ ಅದರ ಸಾಧ್ಯತೆಗಳನ್ನೇಲ್ಲ ತಿಳಿದು ಅದನ್ನು ಅರ್ಥೈಸುವ, ವ್ಯಾಖ್ಯಾನಿಸುವುದು ಸಂಪಾದಕೀಯದ ಒಂದು ಮಾದರಿ.

ರಾಷ್ಟ್ರಹಿತ, ಸಾರ್ವಜನಿಕರ ಹಿತ ದೇಷ್ಟಿಯಿಂದ ಆಗನೇಕಾದ ಕೆಲಸ ಕಾರ್ಯಗಳು, ಕೈಗೋಳ್ಳಬೇಕಾದ ಯೋಜನೆಗಳು ಮೊದಲಾದವುಗಳಿಗೆ ಸರ್ಕಾರಕ್ಕೆ ಸಂಘ ಸಂಸ್ಥೆಗಳಿಗೆ ಕರ್ತವದ್ಯ ಧೀಕ್ಷೆಯನ್ನು ಭೋಧಿಸುವುದು ಸಂಪಾದಕೀಯದ ಇನ್ನೊಂದು ಮಾದರಿ. ಈ ಸಂಪಾದಕೀಯದಲ್ಲಿ ಸಲಹೆ ಸೂಚನೆಗಳನ್ನು ಕೂಡಬಹುದು.

ಆಗಿರುವ ಕೆಲಸದ ಬಗ್ಗೆ, ಆಗುತ್ತಿರುವ ಕೆಲಸದ ಬಗ್ಗೆ ಗುಣಗ್ರಾಹಿಯಾಗಿ, ಸತ್ಯ ಪಕ್ಷಪಾತಿಯಾಗಿ ವಿಮರ್ಶಿಸುವ ಸಂಪಾದಕೀಯ ಮತ್ತೊಂದು ಮಾದರಿ ಇಲ್ಲಿ ಕಟುಟೀಕೆ ಹಾಗೂ ಪ್ರಶಂಸೆ ಎರಡನ್ನೂ ಮಾಡಬಹುದು. ಆದರೆ ಎರಡು ವಸ್ತುನಿಷ್ಠವಾಗಿರಬೇಕು. ಉತ್ಪ್ರೇಕ್ಷೆಯಾಗಿರಬಾರದು.